ಕಲಿಕೆಯ ಕೋರ್ಸುಗಳನ್ನು ರೂಪಿಸುವಂತೆ ನನ್ನನ್ನು ಕೇಳಿಕೊಂಡಿದ್ದರು. ಎರಡು ವರ್ಷ, ಎಂಟು ವರ್ಷ ಮತ್ತು ಹದಿನೇಳು ವರ್ಷದ ಕಲಿಕಾ ಕೋರ್ಸುಗಳನ್ನು ರೂಪಿಸಿದ್ದೇವೆ. ವಿಶ್ವವಿದ್ಯಾಲಯಗಳಲ್ಲಿ ಪ್ರದರ್ಶನ ಕಲೆಗಳ ವಿಭಾಗಗಳನ್ನು ತೆರೆಯುತ್ತಿರುವುದು ಹೊಸ ಬೆಳವಣಿಗೆ. ಗುರು ಬಿಪಿನ್ ಸಿಂಗ್ ಮತ್ತು ನಾವು ನಾಲ್ವರು ಜವೇರಿ ಸೋದರಿಯರು ಹಾಗೂ ಕಲಾವತೀ ಮೇಡಂ ಅವರು ಒಟ್ಟಾಗಿ ಸೇರಿ ಸ್ಥಾಪಿಸಿದ ಮಣಿಪುರಿ ನರ್ತನಾಲಯದಲ್ಲಿಯೂ ಕಲಿಕೆಗೆ ಅವಕಾಶವಿದೆ. ಮುಂಬೈ, ಕಲ್ಕತ್ತಾ, ಮಣಿಪುರದಲ್ಲಿ ಈ ನರ್ತನಾಲಯದ ಶಾಖೆಗಳಿವೆ. ಇಲ್ಲಿಯೂ ನಾಲ್ಕು, ಆರು ಮತ್ತು ಎಂಟು ವರ್ಷಗಳ ಪದವಿಯನ್ನು ನೀಡಲಾಗುತ್ತದೆ. ಈ ಸಂಸ್ಥೆಗಳಲ್ಲಿ ಕಲಿತ ವಿದ್ಯಾರ್ಥಿ-ವಿದ್ಯಾರ್ಥಿನಿಯರು ದೇಶಾದ್ಯಂತ ಮತ್ತು ಜಗತ್ತಿನ ವಿವಿಧೆಡೆಗಳಲ್ಲಿ ಗುರುಗಳಾಗಿ ಮಣಿಪುರಿ ನೃತ್ಯವನ್ನು ಪಸರಿಸುತ್ತಿದ್ದಾರೆ. ಆಗಾಗ ನನ್ನೊಡನೆ ಆನ್‌ಲೈನ್‌ನಲ್ಲಿ ಪಾಠ ಹೇಳಿಸಿಕೊಂಡು ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ. ಜಗತ್ತು ಈಗ ಹತ್ತಿರವಾಗಿದೆಯಲ್ಲಾ ಎಂದು ನಾನು ಅಚ್ಚರಿಪಡುತ್ತೇನೆ. ನರ್ತಾನಾಲಯವು ಮಣಿಪುರಿ ನೃತ್ಯಕ್ಕೆ ಸಂಬಂಧಿಸಿದ 18 ಪುಸ್ತಕಗಳನ್ನು ಪ್ರಕಟಿಸಿದೆ. ಅವುಗಳ ಪೈಕಿ ನಾನು ಹಿಂದಿ ಮತ್ತು ಬೆಂಗಾಲಿ ಭಾಷೆಯಲ್ಲಿ 'ಮಣಿಪುರಿ ನರ್ತನ್' ಮತ್ತು 'ಮಣಿಪುರಿ ತಾಲ್ ಪ್ರಕಾಶ್' ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿರುವೆ. ಉಳಿದಂತೆ ಮಣಿಪುರಿ ನೃತ್ಯ ಶಾಸ್ತ್ರಗಳನ್ನು ವಿವರಿಸುವಂತಹ ಮಾರ್ಗ ಪರಂಪರೆಯನ್ನು ವಿವರಿಸುವ ಪುಸ್ತಕಗಳನ್ನು ಗುರುಗಳೊಡನೆ ಸೇರಿ ಬರೆದಿರುವೆ. ಗುರುಗಳು ಹಿಂದಿ ಮತ್ತು ಬೆಂಗಾಲಿಯಲ್ಲಿ ಬರೆದಿರುವ ವೈಷ್ಣವ ಸಂಗೀತ ಶಾಸ್ತ್ರ ಭಾಗ 1 ಮತ್ತು 2, ಪಂಚಮ್‌ಸರ ಸಂಹಿತಾ, ಬೆಂಗಾಲಿಯಲ್ಲಿ ಮಣಿಪುರಿ ತಾಲ್- ಓ- ಅಲಂಕಾರ್ ಮತ್ತು ಮಣಿಪುರಿ ಗೀತ್ ಮಾಲಿಕಾ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಕಲಿಯುವ ಉತ್ಸಾಹ ಇರುವವರಿಗೆ ಅನುಕೂಲವಾಗಲಿ ಎಂಬ ನಿಟ್ಟನಲ್ಲಿ ಗುರು ಬಿಪಿನ್ ಸಿಂಗ್ ಅವರು ವೈಷ್ಣವ ಶಾಸ್ತ್ರವನ್ನು ಆಧರಿಸಿ ನೃತ್ಯದ ವಿಕಾಸಕ್ಕೆ ಪೂರಕವಾದ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

**◆ ವೈಷ್ಣವ ಪಂಥದ ಹೊರತಾಗಿ ಈ ನೃತ್ಯಪ್ರಕಾರದಲ್ಲಿರುವ ಇತರ ನಂಬಿಕೆಗಳೇನೇನು?**

ನಾನು ಈ ನೃತ್ಯಕ್ಷೇತ್ರಕ್ಕೆ ಅಡಿಯಿಡುವ ಹೊತ್ತಿಗೇ ವೈಷ್ಣವ ಭಕ್ತಿ ಪರಂಪರೆಯೇ ಪ್ರಧಾನವಾಗಿತ್ತು. ಭಾಗ್ಯಚಂದ್ರ ರಾಜನ ಕಾಲದಲ್ಲಿ ಗೌಡಿಯಾ ವೈಷ್ಣವ ಪಂಥದ ಪ್ರಭಾವ ವ್ಯಾಪಿಸಿತ್ತು. ಮಣಿಪುರಿ ನೃತ್ಯ ಪರಂಪರೆಯ ಮೂಲ ಇರುವುದು ಲಾಯಿಹರೊಬಾ ಉತ್ಸವದಲ್ಲಿ. ಮಣಿಪುರದ ಮೈತೇಯಿ ಸಮುದಾಯದಲ್ಲಿ ನಾಲ್ಕು ರೀತಿಯ ಲಾಯಿಹರೊಬಾ ಉತ್ಸವ ನಡೆಸುತ್ತಾರೆ. ಕಂಗ್ಲೇಯಿ ಹರೊಬಾ, ಮೊಯ್‌ರಂಗ್ ಹರೊಬಾ, ಕಕ್‌ಚಿಂಗ್ ಹರೊಬಾ ಮತ್ತು ಚಕ್‌ಪಾ ಹರೋಬಾ. ಲಾಯಿಹರೊಬಾ ಉತ್ಸವವು ಬಹಳ ಪುರಾತನ ಕಾಲದಿಂದಲೂ ನಡೆದು ಬಂದಿದ್ದು ದೇವಿ ಪಾರ್ವತಿ ಮತ್ತು ಪರಮೇಶ್ವರನ ಆರಾಧನೆಯ ಹಬ್ಬವಾಗಿತ್ತಂತೆ. ಮೈತೇಯಿ ಜನರು ಸನಮಹಿ, ಪಖಾಂಗ್‌ಬಾ, ನೊಂಗ್‌ಪೊಕ್ ನಿಂಗ್ತು ಎಂಬ ದೇವತೆಗಳನ್ನು ಆರಾಧಿಸುತ್ತಾ ಈ ನೃತ್ಯೋತ್ಸವವನ್ನು ಆಚರಿಸುತ್ತಾರೆ. ಲಾಯಿಹರೊಬಾ ಇಶೇಯಿ ಎಂಬ ಪ್ರಸಿದ್ಧ ಜನಪದ ಕಾವ್ಯವನ್ನು ಉತ್ಸವದ ವೇಳೆ ಹಾಡುವುದು ವಾಡಿಕೆ. ಜಗತ್ತಿನ ಸೃಷ್ಟಿಯನ್ನು ಕೊಂಡಾಡುವ ತಾಳಪ್ರಧಾನವಾದ (ರಿದಂ) ಹಾಡುಗಳಿವು. ಲಾಯಿಹರೊಬಾ ಉತ್ಸವದಲ್ಲಿ ಉಮಾಂಗ್ ಲೈ (ವನದೇವಿ) ಮತ್ತು ಶಾಗೇ ಲೈ (ಕುಟುಂಬದೇವತೆ)ಯನ್ನು ಆರಾಧಿಸುವ ಪರಿಪಾಠವಿದೆ. ಬಹುಶಃ ವೈಷ್ಣವಪಂಥವು ದೇಶದ ಇತರೆಡೆಗಳಲ್ಲಿಯೂ ತನ್ನ ಛಾಪೊತ್ತಿದ್ದರಿಂದ ಮಣಿಪುರಿ ರಾಸ್‌ಲೀಲಾ ಮತ್ತು ಸಂಕೀರ್ತನೆಯು ಹೊರಜಗತ್ತಿನ ಜೊತೆಗೆ ಬೇಗನೇ ಸಂಪರ್ಕ ಬೆಸೆದುಕೊಂಡಿತು ಎನ್ನಬಹುದು.

**◆ ನೃತ್ಯದ ಹೊರತಾಗಿ ನಿಮ್ಮ ಇತರ ಹವ್ಯಾಸಗಳು, ಆಸಕ್ತಿಗಳೇನು?**

ನನ್ನ ಬದುಕಿನಲ್ಲಿ ಅವುಗಳಿಗೆಲ್ಲ ಜಾಗವೆಲ್ಲಿತ್ತು? ಬುದ್ಧಿ ತಿಳಿಯುವ ವೇಳೆಗೆ ಗುರೂಜಿ ಬೆಳಿಗ್ಗೆ ಮನೆಗೆ ಬಂದು ಅಕ್ಕಂದಿರಿಗೆ ನೃತ್ಯ ಕಲಿಸುತ್ತಿದ್ದುದನ್ನು ನೋಡುತ್ತಿದ್ದೆ. ಅಕ್ಕಂದಿರು ಬೆಳಿಗ್ಗೆ 6 ಗಂಟೆಗೆಲ್ಲಾ ಎದ್ದು ಅಭ್ಯಾಸ ಮಾಡುತ್ತಿದ್ದರು. ನಂತರ ಗುರುಗಳು ಬರುತ್ತಿದ್ದರು.